**ಏಪ್ರಿಲ್‌ನ ‘ವಿಶ್ವ ಆಟಿಸಂ ಮಾಸ’ ಆಚರಣೆ ಸಂದರ್ಭದಲ್ಲಿ ಗಮನಿಸಬೇಕಾದ ವಿಶಿಷ್ಟ ಸಿನಿಮಾ**

ಕಾಡುವ ಅನುಭವ ನೀಡಿದೆ’ ಎಂದರು. ‘ಸಿನಿಮಾದ ಅಂತ್ಯ, ಬಹುತೇಕ ಕಮರ್ಷಿಯಲ್ ಸಿನಿಮಾಗಳಲ್ಲಿ ಬರುವಂತೆ ಯಾವುದೇ ಅವಾಸ್ತವಿಕ ವಿರೋಚಿತ ಯಶಸ್ಸಿಗೆ ಪ್ರಯತ್ನಿಸದೇ ವಾಸ್ತವಕ್ಕೆ ಹತ್ತಿರವಾಗಿದ್ದು ನೈಜ ಆಶಾವಾದವನ್ನು ನೀಡುತ್ತದೆ’ ಎಂದು ಅಭಿಪ್ರಾಯಪಟ್ಟರು.

ವರ್ಣಪಟಲ ಸಿನಿಮಾಕ್ಕೆ ಬ್ರಿಸ್ಟಲ್ ಜೊತೆಗೆ ಆಪ್ತ ಸಂಬಂಧ ಇದೆ. ಸಿನಿಮಾವನ್ನು ಭಾರತೀಯ ಸಂದರ್ಭಗಳಿಗೆ ಹೊಂದುವಂತೆ ಹೆಣೆದಿದ್ದರೂ, ಕಥೆಯನ್ನು ಬರೆದು ನಿರ್ಮಾಣ ಮಾಡಿದವರು ಬ್ರಿಸ್ಟಲ್‌ನ ಕನ್ನಡತಿ. ಇಲ್ಲಿನ ಮಕ್ಕಳ ವೈದ್ಯೆ ಡಾ. ಸರಸ್ವತಿ ಹೊಸದುರ್ಗ ತಮ್ಮ ಸುದೀರ್ಘ ಅನುಭವದಲ್ಲಿ ಆಟಿಸಂ ಇರುವ ಹಲವು ಮಕ್ಕಳನ್ನು ಹತ್ತಿರದಿಂದ ನೋಡಿದವರು. ಯುನೈಟೆಡ್ ಕಿಂಗ್‌ಡಮ್‌ನ ರಾಷ್ಟ್ರೀಯ ಆರೋಗ್ಯ ವ್ಯವಸ್ಥೆ ಶುಶ್ರೂಷೆ ನೀಡುವ ರೀತಿ, ಅಂತಹ ಮಕ್ಕಳಿಗೆಂದೇ ಇರುವ ಶಾಲೆಗಳಲ್ಲಿನ ವಿದ್ಯಾಭ್ಯಾಸ ಪದ್ಧತಿ, ಆರೈಕೆ, ಪೋಷಣೆಗೆಂದು ಇರುವ ಸ್ವತಂತ್ರ ಸಂಸ್ಥೆ, ಇವುಗಳ ನಿಕಟ ಪರಿಚಯ ಇರುವವರು. ಕಥೆಯ ಬಹುತೇಕ ಸಂದರ್ಭಗಳು ವೈದ್ಯಕೀಯ ಅನುಭವ ಮತ್ತು ಸ್ವಲೀನ ಮಕ್ಕಳ ಹೆತ್ತವರು ಒದಗಿಸಿದ ಅನುಭವಗಳಿಂದ ಹುಟ್ಟಿದವು. ಡಾ. ಸರಸ್ವತಿಯವರ ಜೊತೆಗೆ ನಿರ್ಮಾಣದಲ್ಲಿ ಕೈಜೋಡಿಸಿರುವ ಕವಿತಾ ಸಂತೋಷ್, ವಿಶೇಷ ಚೇತನ ಮಕ್ಕಳಿಗಾಗಿ ಕರ್ನಾಟಕದಲ್ಲಿ ಕೆಲಸ ಮಾಡುತ್ತಿರುವವರು. ಈಗಾಗಲೇ ಸಿನಿಮಾ ರಂಗದಲ್ಲಿ ಪರಿಚಿತರಾಗಿರುವ ಚೇತನ್ ಮುಂಡಾಡಿ ಹಾಗೂ ಕಾರ್ತಿಕ್ ಸರಗೂರು ನಿರ್ದೇಶನ ಮತ್ತು ಸಾಹಿತ್ಯದ ಹೊಣೆ ನಿರ್ವಹಿಸಿದ್ದಾರೆ.

ಪ್ರತಿ ಶುಕ್ರವಾರ ರಜತಪರದೆಯ ಮೇಲೆ ರಂಜಿಸಿ ಗಲ್ಲಾಪೆಟ್ಟಿಗೆ ತುಂಬಿಸಿಕೊಳ್ಳುವ ಉದ್ದೇಶಕ್ಕೆಂದೇ ಕಟ್ಟಲಾದ ಸಿನಿಮಾಗಳ ಪ್ರವಾಹದಲ್ಲಿ, ಸಂಕೀರ್ಣ ಮತ್ತು ಸೂಕ್ಷ್ಮ ವಿಷಯವೊಂದರ ಬಗ್ಗೆ ‘ವರ್ಣಪಟಲ’ ತಿಳಿವಳಿಕೆ ಹೆಚ್ಚಿಸುವ ಪ್ರಯತ್ನ ಮಾಡಿರುವುದು ಸಿನಿಮಾದ ದೊಡ್ಡ ಯಶಸ್ಸು. ಚಿತ್ರಕತೆಯಲ್ಲಿ ಬರುವ ಮಗುವಿನ ತಾಯಿ ಹೇಳುವಂತೆ, ಆಕೆಯ ಮಗು ಎಲ್ಲ ಮಕ್ಕಳಂತಲ್ಲ, ಮತ್ತೆ ಆಕೆಯೂ ಎಲ್ಲ ತಾಯಿಯರಂತಲ್ಲ. ಸ್ವಲೀನ ಮಕ್ಕಳಿಗೆ ಅವರು ಮಾತ್ರ ಅನುಭವಿಸಿ ಬದುಕುವ ಒಂದು ವಿಶಿಷ್ಟ ಲೋಕ ಇರುವಂತೆ, ಅಂತಹ ಮಕ್ಕಳ ಹೆತ್ತವರದ್ದೂ ಒಂದು ವಿಚಿತ್ರ ವಿಲಕ್ಷಣ ಲೋಕ. ತಮ್ಮ ಮಕ್ಕಳನ್ನು ತಿಳಿದುಕೊಳ್ಳಲು ಯತ್ನಿಸುತ್ತ, ಮಕ್ಕಳ ಪ್ರಪಂಚದೊಳಗೆ ಪ್ರವೇಶಿಸುವ ಸಾಹಸ ಮಾಡುತ್ತ, ಜೊತೆಗೆ ತಾವು ಇರುವ ಬಹುತೇಕರ ಜಗತ್ತಿನ ನಿರೀಕ್ಷೆ ಮತ್ತು ಒತ್ತಡಗಳನ್ನು ನಿಭಾಯಿಸುವುದೆಂದರೆ, ಒಂದನ್ನೊಂದು ಅರ್ಥ ಮಾಡಿಕೊಳ್ಳಲಾಗದ ಕನಿಷ್ಠ ಎರಡು ಲೋಕಗಳಲ್ಲಿ ಏಕಕಾಲಕ್ಕೆ ಇಬ್ಬಂದಿಯಾಗಿ ಜೀವಿಸುವುದು ಎಂದು ಸಿನಿಮಾ ತೋರಿಸುತ್ತದೆ.

ಸ್ವಲೀನತೆಯ ಎಲ್ಲ ಸಂಕೀರ್ಣತೆಗಳ ವಿವರ ಮತ್ತೆ ಅಂತಿಮವಾಗಿ ಅಂತಹ ಮಕ್ಕಳು ಮತ್ತು ಹೆತ್ತವರು ಅನುಸರಿಸಬಹುದಾದ ಹಾದಿ, ಪರಿಹಾರದ ಸಾಧ್ಯತೆಗಳು ಹಾಗೂ ದೈನಂದಿನ ಸವಾಲುಗಳು ಸಿನಿಮಾದಲ್ಲಿ ಪರಿಪೂರ್ಣವಾಗಿ ಬಂದಿದೆಯೇ ಎನ್ನುವುದರ ಬಗೆಗೆ ಚಿತ್ರವನ್ನು ನೋಡಿದ ಅಂತಹ ಮಕ್ಕಳ ಹೆತ್ತವರ ಅಭಿಪ್ರಾಯ ಹಾಗೂ ಒಬ್ಬ ಸಾಮಾನ್ಯ ಸಿನಿಮಾ ಪ್ರೇಕ್ಷಕರ ನೋಟ ಭಿನ್ನವಾಗಿರುವ ಸಾಧ್ಯತೆ ಇದೆ. ಹಲವು ಸಾವಿರ ನೂಲುಗಳಿಂದ ಕಗ್ಗಂಟಾಗಿರುವ ಕಥನದ ಒಂದು ಎಳೆಯ ಜಾಡನ್ನು ಹಿಡಿದು ಈ ಸಿನಿಮಾ ಸಾಗುತ್ತದೆ. ಸ್ವಲೀನ ಮಕ್ಕಳನ್ನು ಅವರ ತಂದೆತಾಯಿಯರು, ಹತ್ತಿರದ ಬಂಧುಗಳು ಅರ್ಥಮಾಡಿಕೊಳ್ಳಬೇಕಾದುದು ಶುಶ್ರೂಷೆಯ ಪ್ರಮುಖ ಅಗತ್ಯ ಆಗಿರುವಂತೆ, ವಿಶೇಷ ಮಕ್ಕಳ ಸಂಪರ್ಕದಲ್ಲಿ ಬರುವ ಇತರ ಮಕ್ಕಳೂ, ಬೀದಿ ವಠಾರದವರೂ ಸಂವೇದನೆಯಿಂದ ವರ್ತಿಸಿದರೆ ಶುಶ್ರೂಷೆ ಚೇತರಿಕೆಯಲ್ಲಿ ಸಹಾಯ ಆಗುತ್ತದೆ ಎಂದು ಸಿನಿಮಾ ಹೇಳುತ್ತದೆ.

ಆಟಿಸಂನ ಹಲವು ಮಗ್ಗುಲುಗಳನ್ನು, ವಿಸ್ತಾರವನ್ನು ಸಿನಿಮಾ ತಿಳಿಸದಿದ್ದರೂ, ಅಜ್ಞಾತ ಲೋಕವೊಂದಕ್ಕೆ ಕಿಟಕಿಯನ್ನು ತೆರೆಯುವ ಅವಶ್ಯ ಕೆಲಸವನ್ನಂತೂ ಮಾಡುತ್ತದೆ. ಎಲ್ಲರಂತಲ್ಲದ ಎಳೆಯ ಬದುಕುಗಳ ಬಗೆಗೆ ಗೌರವ, ಸಹಾನುಭೂತಿ ಬೆಳೆಸಿಕೊಳ್ಳಲು ಪ್ರೇರೇಪಿಸುತ್ತದೆ. ಮತ್ತೆ ಆ ವಿವರಗಳೇ ಅನಾಮಿಕ ಲೋಕಕ್ಕೆ ಅಪರಿಚಿತರಾದ ಬಹುತೇಕ ಪ್ರೇಕ್ಷಕರ ಮನಸ್ಸನ್ನು ಹೊಕ್ಕು ನೆಲೆಯಾಗುತ್ತವೆ. ಆದರೆ, ಕಮರ್ಷಿಯಲ್ ಸಿನಿಮಾಗಳಲ್ಲಿ ಬರುವಂತಹ ಕೆಲವು ಸನ್ನಿವೇಶಗಳು ಮುಖ್ಯ ಕಥಾವಸ್ತುವಿಗೆ ಪೂರಕ ಎನಿಸದೆ ಕಥೆಗೆ ತಿರುವು ರೋಚಕತೆ ನೀಡುವ ಜನಪ್ರಿಯ ಸಿದ್ಧ ಮಾದರಿಯ ಅನುಸರಣೆಯಾಗಿವೆ.

ಸಿನಿಮಾದ ಒಂದು ನಿರ್ಣಾಯಕ ಸನ್ನಿವೇಶದಲ್ಲಿ ಕೇಳಿಸಲಾದ ‘ಹಾಡೋಕೆ ಬರ್ದೇ ಇದ್ದ ಮೈನಾ ಹಕ್ಕಿಗೆ ಒಂದು ಹಾಡು ಬಂತು’ ಗೀತೆಯ ಸಂಗೀತ–ಸಾಹಿತ್ಯ, ಇಡೀ ಸಿನಿಮಾದ ಅಥವಾ ವಾಸ್ತವದ ಕಥೆಗಳ ರೂಪಕವಾಗಿ ಮನಸ್ಸಿನಲ್ಲಿ ಉಳಿಯುತ್ತದೆ. ಸಿನಿಮಾದ ಸಹಶೀರ್ಷಿಕೆ ಹೇಳುವಂತೆ ‘ವರ್ಣಪಟಲ’ ಒಂದು ಹೇಳದ ಕಥನ (an untold story). ಕನ್ನಡದ ಮಟ್ಟಿಗೆ ಮಾತ್ರವಲ್ಲದೆ, ಜಗತ್ತಿನ ಒಟ್ಟು ಸಿನಿಮಾಗಳ ಮಟ್ಟಿಗೂ ವಿಶಿಷ್ಟ ಅಪರೂಪದ ಪ್ರಯೋಗ; ಸ್ವಲೀನ ಮಕ್ಕಳು ಇರುವ ವಿಚಿತ್ರ ಲೋಕದ ಕುರಿತಾದ ಅರಿವನ್ನು ಹೆಚ್ಚಿಸುವ ಹಾಗೂ ಸುತ್ತಮುತ್ತಲಿನವರ ಹೊಣೆಗಾರಿಕೆಯನ್ನು ಎಚ್ಚರಿಸುವ ವಿನಮ್ರ ಪ್ರಯತ್ನ.

ಪ್ರತಿಕ್ರಿಯಿಸಿ: feedback@sudha.co.in

